7. ಪ್ರಕಟಣೆ

ವಿಷಯ: ಮಾನ್ಯ ಸದಸ್ಯರುಗಳಿಗೆ ಸಾವಯವ ಕೃಷಿ ಪದ್ಧತಿ ಕುರಿತು

ಅಧ್ಯಕ್ಷರು: ಉಳಿದ ಚರ್ಚೆಯನ್ನು ನಾಳೆ ಮುಂದುವರೆಸೋಣ. ಶ್ರೀ ಸುಭಾಷ್ ಪಾಳೇಕರ್‌ರವರದು ನೈಸರ್ಗಿಕ ಕೃಷಿ ಬಗ್ಗೆ ಮೊನ್ನೆ ಏನು ಕಾರ್ಯಾಗಾರ ಪ್ರಾರಂಭ ಮಾಡಿದ್ದಾರೆ, ಅದು ಇವತ್ತು ಸಾಯಂಕಾಲ ಆರು ಗಂಟೆಗೆ ಮತ್ತು ನಾಳೆ ಸಾಯಂಕಾಲ ಆರು ಗಂಟೆಗೆ ಎರಡು ದಿವಸಗಳ ಕಾಲ ಮಾತ್ರ ನಡೆಯುತ್ತಿದೆ. ನೈಸರ್ಗಿಕ ಕೃಷಿ ಬಗ್ಗೆ ಬಹಳ ಉತ್ತಮವಾದ ವಿಚಾರಗಳನ್ನು ಅವರು ಹೇಳುತ್ತಾರೆ. ಶಾಸಕರು ಅದರ ಸದುಪಯೋಗ ಪಡೆದುಕೊಳ್ಳಬೇಕೆಂದು ನನ್ನ ವಿನಂತಿ. ಮೊನ್ನೆಯೂ ಸಹ ಸದಸ್ಯರ ಸಂಖ್ಯೆ ಬಹಳ ಕಡಿಮೆ ಇತ್ತು. ಈ ದಿನದ ಕಾರ್ಯಾಗಾರದಲ್ಲಿ ದಯವಿಟ್ಟು ಎಲ್ಲರೂ ಭಾಗವಹಿಸಿ ರೈತರ ಬಗ್ಗೆ ನಾವು ಏನು ಚರ್ಚೆ ಮಾಡುತ್ತಿದ್ದೇವೆ ಈ ಹಿನ್ನೆಲೆಯಲ್ಲಿ ನೈಸರ್ಗಿಕ ಕೃಷಿ ಬಗ್ಗೆ ನಾವು ತಿಳಿದುಕೊಳ್ಳುವುದು ಬಹಳ ಅವಶ್ಯಕವಿದೆ. ದಯವಿಟ್ಟು ಎಲ್ಲರೂ ಭಾಗವಹಿಸಬೇಕೆಂದು ವಿನಂತಿ ಮಾಡಿಕೊಂಡು ಉಳಿದ ಚರ್ಚೆಯನ್ನು ನಾಳೆ ಮುಂದುವರೆಸುತ್ತಿದ್ದೇನೆ. ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ಸಂಜೆ 5-25 ಗಂಟೆಗೆ ಮುಂದೂಡಲಾಗಿ, ಪುನ: 24-07-2008 ರಂದು ಬೆಳಿಗ್ಗೆ 11-00 ಗಂಟೆಗೆ ಸೆರಲು ನಿಶ್ಚಯಿಸಲಾಯಿತು)

38 (44) ಶ್ರೀ ಬಾಲಕೃಷ್ಣ ಹೆಚ್.ಪಿ. (ಮಾಗಡಿ) :- ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

(ಅ) ಮಾಗಡಿ ತಾಲ್ಲೂಕು ಹಾಗೂ ರಾಮನಗರ ತಾಲ್ಲೂಕಿನಲ್ಲಿರು ಪ್ರೌಢಶಾಲೆಗಳ ಸಂಖ್ಯೆ ಎಷ್ಟು ;

(ಆ) ಇದರಲ್ಲಿ ಉರ್ದು ಶಾಲೆಗಳ (ಪ್ರೌಢ) ಸಂಖ್ಯೆ ಎಷ್ಟು ವಿವರ ಒದಗಿಸುವುದು;

(ಇ) ಈ ಪ್ರಾಢಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಶಿಕ್ಷಕರ ಕೊರತೆ ಇರುವ ಶಾಲೆಗಳ ವಿವರ ಒದಗಿಸುವುದು ;

(ಉ) ಈ ಖಾಲಿ ಹುದ್ದೆಗಳನ್ನು ಎಷ್ಟು ದಿನದಲ್ಲಿ ಭರ್ತಿ ಮಾಡಲಿದೆ ಹಾಗೂ ವಿದ್ಯಾರ್ಥಿಗಳ ಸುಗಮ ವಿದ್ಯಾಭ್ಯಾಸಕ್ಕೆ ಅವಕಾಶ ಕಲ್ಪಿಸಿ ಕೊಡಲಾಗುವುದೇ?

ಶ್ರೀ ವಿರೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಸಚಿವರು :

(ಅ) ಒಟ್ಟು 46 ಪ್ರೌಢಶಾಲೆಗಳಿವೆ.

(ಆ) ಎರಡು ಉರ್ದು ಪ್ರೌಢಶಾಲೆಗಳಿವೆ.

(ಇ) ಹೌದು, ಬಂದಿದೆ.

(ಈ) ಶಿಕ್ಷಕರ ಕೊರತೆಯಿರುವ ಶಾಲೆಗಳ ಪಟ್ಟಿಯನ್ನು ಅನುಬಂಧದಲ್ಲಿ ಲಗತ್ತಿಸಿದೆ.

(ಉ) ಮಾಗಡಿ ಮತ್ತು ರಾಮನಗರ ತಾಲ್ಲೂಕುಗಳಲ್ಲಿ ಒಟ್ಟು 40 ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತವೆ. ಈ ಖಾಲಿ ಹುದ್ದೆಗಳನ್ನು ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಬಡ್ತಿ ನೀಡುವುದರ ಮೂಲಕ ಭರ್ತಿ ಮಾಡಲು ಕ್ರಮ ವಹಿಸಲಾಗಿದೆ. ಬಡ್ತಿಗೆ ಸಂಬಂಧಿಸಿದಂತೆ ಅರ್ಹ ಶಿಕ್ಷಕರ ಅಂತಿಮ ಜೇಷ್ಠತಾ ಪಟ್ಟಿ ತಯಾರಿಸಿ ಪ್ರಕಟಿಸಲಾಗಿದ್ದು, ಶೀಘ್ರವಾಗಿ ಬಡ್ತಿ ನೀಡುವುದರ ಮೂಲಕ ಕೊರತೆಯನ್ನು ಸರಿದೂಗಿಸಿ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಅವಕಾಶ ಮಾಡಿಕೊಡಲಾಗುವುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 44 ಕ್ಕೆ ಅನುಬಂಧ

ಶಿಕ್ಷಕರ ಕೊರತೆಯಿರುವ ಶಾಲೆಗಳ ಪಟ್ಟಿ

ಕ್ರ.ಸಂ	ಶಾಲೆಯ ಹೆಸರು	ತಾಲ್ಲೂಕು	ಖಾಲಿಯಿರುವ ಹುದ್ದೆಗಳ ಸಂಖ್ಯೆ	ಹುದ್ದೆಗಳ ವಿವರ
1	ಸ.ಪ.ಪೂ.ಕಾಲೇಜು ಬಿಡದಿ	ರಾಮನಗರ ತಾ॥	2	ಕಲಾ-01 ಕನ್ನಡ-01
2	ಸ.ಬಾಲಕರ.ಪ.ಪೂ.ಕಾಲೇಜು ರಾಮನಗರ ಟೌನ್	ರಾಮನಗರ ತಾ॥	5	ಕಲಾ-01 ಹಿಂದಿ-01 ಸಿಬಿಜಡ್-01 ದೈಶಿ.-01 ಆಂಗ್ಲ-01
3	ಸ.ಸಂಯುಕ್ತ.ಪ್ರೌ.ಶಾಲೆ ಐಜೂರು ರಾಮನಗರ ಟೌನ್	ರಾಮನಗರ	2	ಕಲಾ-01 ಪಿಸಿಎಂ-01
4	ಸ.ಬಾಲಕಿಯರ ಪ.ಪೂ.ಕಾಲೇಜು ರಾಮನಗರ ಟೌನ್	ರಾಮನಗರ	3	ಕಲಾ-01 ಹಿಂದಿ-01 ಪಿಸಿಎಂ-01

5	ಸ.ಪ್ರೌ.ಶಾ. ಹನುಮಂತನಗರ ಟೌನ್	ರಾಮನಗರ	05	ಕನ್ನಡ-01 ಹಿಂದಿ-01 ಸಿಬಿಜಡ್-01 ಆಂಗ್ಲ-01 ದೈ.ಶಿ.-01
6	ಸ.ಪ್ರೌ.ಶಾ. ಜೋಡಿಕರೇನಹಳ್ಳಿ	ರಾಮನಗರ	01	ಪಿಸಿಎಂ-01
7	ಸ.ಪ್ರೌ.ಶಾ. ಹೆಬ್ಬಕೋಡಿ	ರಾಮನಗರ	01	ಪಿಸಿಎಂ.-01
8	ಸ.ಪ್ರೌ.ಶಾ. ಲಕ್ಕೋಜನಹಳ್ಳಿ	ರಾಮನಗರ	01	ಪಿಸಿಎಂ-01
9	ಸ.ಪ.ಪೂ.ಕಾ. ಜಾಲಮಂಗಲ	ರಾಮನಗರ	01	ಪಿಸಿಎಂ-01
10	ಸ.ಉರ್ದು ಪ್ರೌಢಶಾಲೆ ರಾಮನಗರ ಟೌನ್	ರಾಮನಗರ	01	ದೈ.ಶಿ.-01
11	ಸ.ಪ.ಪೂ.ಕಾ. ಅವ್ವೇರಹಳ್ಳಿ	ರಾಮನಗರ	01	ದೈ.ಶಿ.-01
12	ಸ.ಪ.ಪೂ.ಕಾ. ತಿಪ್ಪಸಂದ್ರ	ಮಾಗಡಿ ತಾ॥	01	ಕಲಾ-01
13	ಸ.ಪ್ರೌ.ಶಾ. ಶಿವನಸಂದ್ರ	ಮಾಗಡಿ ತಾ॥	03	ಕಲಾ-01 ಕನ್ನಡ-01 ಪಿಸಿಎಂ-01
14	ಸ.ಸಂಯುಕ್ತ ಪ್ರೌ.ಶಾ. ಶ್ರೀಗಿರಿಮರ	ಮಾಗಡಿ ತಾ॥	01	ಕಲಾ-01
15	ಸ.ಸಂಯುಕ್ತ ಪ್ರೌ.ಶಾ ಲಕ್ಕೇನಹಳ್ಳಿ	ಮಾಗಡಿ ತಾ॥	03	ಕಲಾ-01 ಕನ್ನಡ-01 ಹಿಂದಿ-01
16	ಸ.ಹೆಣ್ಣುಮಕ್ಕಳ ಪ್ರೌ.ಶಾ. ಕಲ್ಯಾ ಗೇಟ್	ಮಾಗಡಿ ಟೌನ್	02	ಹಿಂದಿ-01 ಪಿಸಿಎಂ-01
17	ಸ.ಪ.ಪೂ.ಕಾಲೇಜು ಕುದೂರು	ಮಾಗಡಿ ತಾ॥	01	ಪಿಸಿಎಂ-01
18	ಸ.ಪ್ರೌ.ಶಾ. ಮತಿಗನಹಳ್ಳಿ	ಮಾಗಡಿ ತಾ॥	02	ಪಿಸಿಎಂ-01 ದೈ.ಶಿ.-01
19	ಸ.ಪ.ಪೂ.ಕಾ. ಮಾಗಡಿ ಟೌನ್	ಮಾಗಡಿ	01	ಪಿಸಿಎಂ-01
20	ಸ.ಪ್ರೌ.ಶಾ. ಮಾದಿಗೊಂಡನಹಳ್ಳಿ	ಮಾಗಡಿ ತಾ॥	02	ಪಿಸಿಎಂ-01 ದೈ.ಶಿ.-01
21	ಸ.ಪ್ರೌ.ಶಾ. ಮಾಡಬಾಳ್	ಮಾಗಡಿ ತಾ॥	01	ಸಿಬಿಜಡ್-01
			40	

ಘೋಷ್ವಾರೆ:

ಕ್ರ.ಸಂ	ತಾಲ್ಲೂಕ್	ಕಲಾ	ಕನ್ನಡ	ಪಿಸಿಎಂ	ಸಿಬಿಜೆಡ್	ಹಿಂದಿ	ದೈ.ಶಿ.	ಆಂಗ್ಲ	ಒಟ್ಟು
1	ರಾಮನಗರ ತಾ॥	4	2	6	2	3	4	2	23
2	ಮಾಗಡಿ ತಾ॥	4	2	6	1	2	2	--	17
	ಒಟ್ಟು	8	4	12	3	5	6	2	40